# ಗಲ್ಲಿಯಿಂದ ಡೆಲ್ಲಿವರೆಗೆ ಬೆಳೆದ

# ಅಕೀಬ್ ನಬಿ

■ ಗಿರೀಶ ದೊಡ್ಡಮನಿ



‘ನನ್ನ ಎದುರುಗಡೆ ಯಾವ ಬ್ಯಾಟರ್ ಇದ್ದಾರೆ ಎಂಬುದನ್ನು ನೋಡುವುದಿಲ್ಲ. ವಿಕೆಟ್ ತೆಗೆದುಕೊಳ್ಳುವುದರತ್ತ ಮಾತ್ರ ಗಮನ ನೀಡುತ್ತೇನೆ. ಅದಕ್ಕೆ ತಕ್ಕಂತೆ ಬೌಲಿಂಗ್ ಮಾಡುತ್ತೇನೆ...’–

ಜಮ್ಮು–ಕಾಶ್ಮೀರ ಕ್ರಿಕೆಟ್ ತಂಡದ ಬಲಗೈ ವೇಗದ ಬೌಲರ್ ಅಕೀಬ್ ನಬಿ ದಾರ್ ಅವರ ನೇರ ನುಡಿ ಇದು. ಅವರ ಎಸೆತಗಳಷ್ಟೇ ಬೌಲಿಂಗ್ ಕೂಡ ನೇರ ಮತ್ತು ಮೊನಚು. ಪ್ರಸಕ್ತ ರಣಜಿ ಋತುವಿನಲ್ಲಿ ದೂಳೆಬ್ಬಿಸಿರುವ ಬೌಲರ್ ಇವರು. 29 ವರ್ಷದ ಅಕೀಬ್ ‘ಬಾರಾಮುಲ್ಲಾ ಎಕ್ಸ್‌ಪ್ರೆಸ್’ ಎಂದೇ ಹೆಸರು ಗಳಿಸಿದ್ದಾರೆ. ಪ್ರಸಕ್ತ ಋತುವಿನಲ್ಲಿ 60 ವಿಕೆಟ್ (ಹುಬ್ಬಳ್ಳಿಯಲ್ಲಿ ನಡೆದ ಕರ್ನಾಟಕ ಎದುರಿನ ಫೈನಲ್ ಪಂದ್ಯದ ಮೊದಲ ಇನಿಂಗ್ಸ್‌ವರೆಗೆ) ಗಳಿಸಿದ್ದಾರೆ. ಅವರ ಅಮೋಘ ಬೌಲಿಂಗ್‌ನಿಂದಾಗಿ ಜಮ್ಮು–ಕಾಶ್ಮೀರ ತಂಡವು ಇದೇ ಮೊದಲ ಸಲ ರಣಜಿ ಟ್ರೋಫಿ ಫೈನಲ್ ಪ್ರವೇಶಿಸಿ, ಚಾರಿತ್ರಿಕ ದಾಖಲೆ ಮಾಡಿತು. ಅಕೀಬ್ ಅವರು ಈಗ ಭಾರತ ತಂಡದ ಕದ ತಟ್ಟುತ್ತಿದ್ದಾರೆ.

ಆದರೆ ಅವರು ಎತ್ತರಕ್ಕೇರಲು ಪಟ್ಟ ಪರಿಶ್ರಮ ಅಪಾರ. ಸವೆಸಿದ ಹಾದಿಯಲ್ಲಿ ಕಲ್ಲು, ಮುಳ್ಳುಗಳಷ್ಟೇ ಅಲ್ಲ; ಕಣಿವೆಗಳೇ ಇದ್ದವು!

ಕಾಶ್ಮೀರದ ಶೀರಿ ಎಂಬ ಗ್ರಾಮದ ಮಧ್ಯಮವರ್ಗದ ಕುಟುಂಬದ ಕುಡಿ ಅಕೀಬ್. ತಂದೆ ಗುಲಾಮ್ ನಬಿ ದಾರ್ ಅವರು ಶಿಕ್ಷಕರಾಗಿದ್ದರು. ಬಾಲ್ಯದಲ್ಲಿ ಟೆನಿಸ್ ಬಾಲ್ ಕ್ರಿಕೆಟ್ ಆಡುತ್ತಿದ್ದ ಹುಡುಗ ಓದಿನಲ್ಲಿ ಅಷ್ಟಕ್ಕಷ್ಟೇ. ಆದರೆ ಅಪ್ಪನಿಗೆ ತಮ್ಮ ಮಗ ವೈದ್ಯನಾಗಬೇಕೆಂಬ ಆಸೆ ಇತ್ತು. ಆದ್ದರಿಂದ ಅವರಿಗೆ ಅಕೀಬ್ ಕ್ರಿಕೆಟ್ ಆಡುವುದು ಅಷ್ಟೇನೂ ಇಷ್ಟವಿರಲಿಲ್ಲ.

ಅದಕ್ಕಾಗಿ ಫತೇಗಡದ ಸರ್ಕಾರಿ ಹೈಯರ್ ಸೆಕೆಂಡರಿ ಶಾಲೆಗೆ ಸೇರಿಸಿದರು. ಬಾರಾಮುಲ್ಲಾದ ಬೀದಿಗಳಲ್ಲಿ ಮೋಜಿಗಾಗಿ ಟೆನಿಸ್ ಬಾಲ್ ಕ್ರಿಕೆಟ್ ಆಡುತ್ತಿದ್ದರು. ಆ ಪ್ರದೇಶದಲ್ಲಿ ವೃತ್ತಿಪರ ಕ್ರಿಕೆಟ್ ಕೋಚಿಂಗ್ ಕೊರತೆಯೂ ಇತ್ತು.

ಆದರೆ ಅವರ ಜೀವನಕ್ಕೆ ನಿಜವಾದ ತಿರುವು ಸಿಕ್ಕಿದ್ದು ಜಮ್ಮು–ಕಾಶ್ಮೀರ ಕ್ರಿಕೆಟ್ ಸಂಸ್ಥೆ (ಜೆಕೆಸಿಎ) 16 ವರ್ಷದೊಳಗಿನವರ ವಯೋಮಿತಿ ತಂಡದ ಆಯ್ಕೆ ಟ್ರಯಲ್ಸ್‌ಗೆ ಗೆಳೆಯನೊಬ್ಬ ಕರೆದೊಯ್ದಾಗ. ಆದರೆ ಅವರ ಬಳಿ ಆಗ ಕ್ರಿಕೆಟ್ ಬೂಟುಗಳೂ (ಸ್ಪೈಕ್ಸ್) ಇರಲಿಲ್ಲ. ಸಾಧಾರಣವಾದ ಸ್ಪೋರ್ಟ್ಸ್ ಶೂಗಳಷ್ಟೇ ಇದ್ದವು. ಮೊದಲ ಅವಕಾಶದಲ್ಲಿ ಅವರು ಆಯ್ಕೆಯಾಗಲಿಲ್ಲ. ಆದರೆ ಅದನ್ನೇ ಛಲವಾಗಿಟ್ಟುಕೊಂಡು ಸತತ ಅಭ್ಯಾಸ ಮಾಡಿದರು. 2018ರಲ್ಲಿ ಅವರು ಕಾಶ್ಮೀರದ ತಂಡಕ್ಕೆ ಆಯ್ಕೆಯಾದರು. ಲಿಸ್ಟ್ ಎ ಟೂರ್ನಿಗೆ ಆಯ್ಕೆಯಾದರು.

ಆದರೆ ತರಬೇತಿಗಾಗಿ ಅವರು ಪ್ರತಿದಿನವೂ ಬಾರಾಮುಲ್ಲಾದಿಂದ 60 ಕಿ.ಮೀ. ದೂರದ ಶೇರ್ ಎ ಕಾಶ್ಮೀರ ಕ್ರೀಡಾಂಗಣಕ್ಕೆ ತೆರಳಬೇಕಿತ್ತು. ಆದರೂ ಅವರ ಆಸಕ್ತಿ ಕುಂದಲಿಲ್ಲ. ದಕ್ಷಿಣ ಆಫ್ರಿಕಾದ ಡೆಲ್ ಸ್ಟೇನ್ ಅವರಿಂದ ಬಹಳಷ್ಟು ಪ್ರಭಾವಿತರಾಗಿ ವೇಗದ ಬೌಲರ್ ಆದರು. ತಂದೆಯಿಂದ ಆರಂಭದಲ್ಲಿ ವಿರೋಧ ವ್ಯಕ್ತವಾಯಿತು. ಕ್ರಮೇಣ ಮಗನ ಆಸಕ್ತಿಯನ್ನು ಗಮನಿಸಿ ಪ್ರೋತ್ಸಾಹ ನೀಡಿದರು.

ಅಕೀಬ್ ಅವರು ಕಾಶ್ಮೀರದ 23 ವರ್ಷದೊಳಗಿನವರ ತಂಡಕ್ಕೆ ಮೂರು ವರ್ಷ ಆಡಿದರು. 2020ರಲ್ಲಿ ಅವರಿಗೆ ರಣಜಿ ಟ್ರೋಫಿ ಪಂದ್ಯದಲ್ಲಿ ಪದಾರ್ಪಣೆ ಮಾಡುವ ಅವಕಾಶ ಒದಗಿಬಂದಿತು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಅವರಿಗೆ ಇಲ್ಲಿಯವರೆಗೂ ಯಾರೂ ಬೌಲಿಂಗ್ ಕೋಚ್ ಇರಲಿಲ್ಲ.

ಆದರೆ ರಣಜಿ ತಂಡಕ್ಕೆ ಪದಾರ್ಪಣೆ ಮಾಡಿದಾಗ ಅಂತರರಾಷ್ಟ್ರೀಯ ಮಾಜಿ ಆಟಗಾರ ಇರ್ಫಾನ್ ಪಠಾಣ್ ಅವರ ಮಾರ್ಗದರ್ಶನ ಲಭಿಸಿತು. ಮಣಿಕಟ್ಟಿನ ಚಲನೆಯ ಕುರಿತು ವಿಶೇಷ ಗಮನ ನೀಡುವಂತೆ